Nov 10, 2012

ಸಂಯುಕ್ತ ಕರ್ನಾಟಕ

# ರಿಯಲ್ ಎಸ್ಟೇಟ್ ಮಾರುಕಟ್ಟೆಗೆ 'ಎರ್ಝಿ ಸಮೂಹ' ಪ್ರವೇಶ

ಬೆಂಗಳೂರು, ನ. 9: ಜಾಗತಿಕ ಮಟ್ಟದ ಮೂಲ ಸೌಕರ್ಯ ಮತ್ತು ಆಸ್ತಿ ನಿರ್ವಹಣೆ ಖ್ಯಾತ ಕಂಪನಿ ಎರ್ಝಿ ಸಮೂಹ ಭಾರತದ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಮುಂದಿನ ಎರಡು ವರ್ಷಗಳಲ್ಲಿ 650 ಕೋಟಿ ರೂ. ಬಂಡವಾಳ ಹೂಡಲು ನಿರ್ಧರಿಸಿದೆ.

ಬೆಂಗಳೂರಿನಲ್ಲಿ ಕಂಪನಿಯ ಮೊದಲ ಯೋಜನೆ ಆರಂಭವಾಗಲಿದೆ. ಈ ಯೋಜನೆಯನ್ನು ವಿಶ್ವವಿಖ್ಯಾತ ವಾಸ್ತು ಶಿಲ್ಪಿ ಟೋನಿ ಆಶಾಯ್ ರೂಪಿಸಿದ್ದಾರೆ.ಬಂಡವಾಳ ಹೂಡಿಕೆ ಕುರಿತು ತಿಳಿಸಿರುವ ಎರ್ಝಿ ಸಮೂಹದ ಅಧ್ಯಕ್ಷ ಶಬ್ಬೀರ್ ಸೈಫುದ್ದೀನ್, ಭಾರತದ ರಿಯಾಲ್ಟಿ ಮಾರುಕಟ್ಟೆಗೆ ಹೊಸದನ್ನು ಕೊಡುವ ಉದ್ದೇಶವನ್ನು ಹೊಂದಿದ್ದೇವೆ. ನಿವಾಸ ಮತ್ತು ವಾಣಿಜ್ಯ ಯೋಜನೆಗಳಿಗಾಗಿ 500 ಕೋಟಿ ರೂ. ಪ್ರತ್ಯೇಕವಾಗಿ ಇರಿಸಿದ್ದೇವೆ ಎಂದರು. ಎರ್ಝಿ ಸಮೂಹ ಈ ಯೋಜನೆಗಾಗಿ ಆಂತರಿಕವಾಗಿ ಹಣ ಸಂಗ್ರಹ ಮಾಡಿದ್ದು, ಬೆಂಗಳೂರು ಮತ್ತು ಮುಂಬೈನಲ್ಲಿ ಹೂಡಿಕೆ ಮಾಡಲಿದೆ. ಎಫ್‌ಡಿಐ ಮಾರ್ಗದಿಂದಲೂ ಹಣ ಸಂಗ್ರಹಿಸುವ ಗುರಿ ಹೊಂದಿದ್ದು ಒಂದು ಮಿಲಿಯನ್ ಚದರ ಅಡಿಗಿಂತ ಹೆಚ್ಚು ಯೋಜನೆಳನ್ನು ಹೊಂದಿದೆ ಎಂದು ವಿವರಿಸಿದರು. ಆಶಾಯ್ ಡಿಸೈನ್ ಕಾರ್ಪೋರೇಷನ್ ಸಿಇಒ ಟೋನಿ ಆಶಾಯ್ ಮಾತನಾಡಿ, ಬೆಂಗಳೂರಿನ ಹೆಣ್ಣೂರು ರಸ್ತೆಯಲ್ಲಿ ನಿರ್ಮಾಣವಾಗಲಿರುವ ಯೋಜನೆಯಲ್ಲಿ 25 ಬೋಟಿಕ್ ರೋ ವಿಲ್ಲಾಗಳಿದ್ದು, ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನ್ವಯ ನಿರ್ಮಿಸಲಾಗಿದೆ. ಪ್ರತಿ ವಿಲ್ಲಾದಲ್ಲಿ ಅತ್ಯುತ್ತಮ ಇಟಾಲಿಯನ್ ಆರ್ಕಿಟೆಕ್ಚರ್ ಅತ್ಯುತ್ತಮ ಇಟಾಲಿಯನ್ ವಾಸ್ತುಶಿಲ್ಪದ ಸೌಂದರ್ಯ ಹೊಂದಿದೆ ಎಂದರು.

ಅವೆನ್ಯೂ ಬೋಟಿಕ್ ರೆಸಿಡೆನ್ಸಿಗಳ ಆಕರ್ಷಕ ಸಂಗ್ರಹವಾಗಿದ್ದು, ಅತ್ಯುತ್ತಮ ಜೀವನಮಟ್ಟಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ವಿನ್ಯಾಸಗೊಳಿಸಲಾಗಿದೆ. ಈ ಐಷಾರಾಮಿ ಅಪಾರ್ಟ್‌ಮೆಂಟ್‌ಗಳು ಆಧುನಿಕ ಕುಟುಂಬದ ಕಾಸ್ಮೋಪಾಲಿಟನ್ ಜೀವನ ಶೈಲಿಗೆ ಅನುಗುಣವಾಗಿ ರೂಪಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

EZZY
GROUP